ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ.,
ಮಳವಳ್ಳಿ

**ಅಸಲು ದಾವಾ ಸಂಖ್ಯೆ: 33/2017**

ವಾದಿ: ಚಿಕ್ಕಲಿಂಗೇಗೌಡ ಪೌತಿ ಬಾಬ್ತು ವಾರಸು
& ಇನ್ನೊಬ್ಬರು

ವಿರುದ್ಧ

ಪ್ರತಿವಾದಿಯರು: ಶಿವಲಿಂಗೇಗೌಡ & ಇತರರು

**2ನೇ ವಾದಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದ ಮೂಲಕ**

PW1

| | |
|---|---|
| ಹೆಸರು | : ನಟರಾಜು |
| ತಂದೆಯ ಹೆಸರು | : ಲೇಟ್ ಸಿದ್ದೇಗೌಡ |
| ವಯಸ್ಸು | : ಸುಮಾರು 50 ವರ್ಷ, |
| ಉದ್ಯೋಗ | : ವ್ಯವಸಾಯ |
| ವಾಸ | : ನಂದಿಪುರ |

1) ನಮ್ಮ ಕುಟುಂಬದ ಮೂಲ ಪುರುಷ ಚಿಕ್ಕಲಿಂಗೇಗೌಡ ಅವರು ಪೌತಿಯಾಗಿರುತ್ತಾರೆ. ಅವರಿಗೆ ಮೊದಲನೇ ಹೆಂಡತಿ ಹೊನ್ನಮ್ಮ. ಹೊನ್ನಮ್ಮರವರು ಮರಣ ಹೊಂದಿದ ನಂತರ ಚಿಕ್ಕಲಿಂಗೇಗೌಡರವರು ಚೌಡಮ್ಮರವರನ್ನು ವಿವಾಹ ಆಗಿರುತ್ತಾರೆ.

2) ನನ್ನ ತಾತ ಚಿಕ್ಕಲಿಂಗೇಗೌಡರಿಗೆ ಅವರ ಮೊದಲನೇ ಹೆಂಡತಿ ಹೊನ್ನಮ್ಮನಿಂದ ಶಿವಲಿಂಗೇಗೌಡ, ಮುದ್ದಲಿಂಗೇಗೌಡ, ಅಣ್ಣೇಗೌಡ ಮತ್ತು ದೊಡ್ಡತಾಯಮ್ಮ ಎಂಬ ಮಕ್ಕಳು ಜನಿಸಿರುತ್ತಾರೆ. ಚಿಕ್ಕಲಿಂಗೇಗೌಡರ ಮೊದಲನೇ ಹೆಂಡತಿಯ ಹಿರಿಯ ಮಗ ಶಿವಲಿಂಗೇಗೌಡರವರಿಗೆ ಹೆಂಡತಿ ಶಿವನಮ್ಮ ಮರಣ ಹೊಂದಿದ್ದು ಇವರುಗಳಿಗೆ ಶಿವಲಿಂಗೇಗೌಡ ಈ ದಾವೆಯ ಪ್ರತಿವಾದಿ, ನಂತರ ಶಿವಲಿಂಗಮ್ಮ, ನಂತರ ಚಿಕ್ಕತಾಯಮ್ಮ ಮತ್ತು ಈ ದಾವೆಯ ವಾದಿಯಾದ ಚಿಕ್ಕಲಿಂಗೇಗೌಡ ಜನಿಸಿರುತ್ತಾರೆ.

NOTARY M. BASAVARAJU Area MALAVALLI Revenue Taluk Reg. No. Law 44 LCL99 Expiry: 5-4-2027 GOVT. OF KARNATAKA

3) ನನ್ನ ತಾತ ಚಿಕ್ಕಲಿಂಗೇಗೌಡರಿಗೆ ಅವರ 2ನೇ ಹೆಂಡತಿ ಚೌಡಮ್ಮರವರಿಂದ ಚೌಡಮ್ಮ ಮತ್ತು ನನ್ನ ತಂದೆ ಸಿದ್ದೇಗೌಡ, ಪುಟ್ಟಸ್ವಾಮಿಗೌಡ ಮತ್ತು ಸಿದ್ದಲಿಂಗೇಗೌಡ ಜನಿಸಿರುತ್ತಾರೆ. ಈ ಪೈಕಿ ನನ್ನ ಚಿಕ್ಕಪ್ಪ ಪುಟ್ಟಸ್ವಾಮಿ ಗೌಡ ರವರು ಮರಣ ಹೊಂದಿರುತ್ತಾರೆ.

4) ಚಿಕ್ಕಲಿಂಗೇಗೌಡರ 2ನೇ ಹೆಂಡತಿ ಚೌಡಮ್ಮನ ಮಗ ಸಿದ್ದೇಗೌಡ ಅಂದರೆ ನನ್ನ ತಂದೆಗೆ ಸರೋಜಮ್ಮ, ಶಿವಲಿಂಗೇಗೌಡ, ಜಯಮ್ಮ(ಪೌತಿ), ರತ್ನಮ್ಮ(ಪೌತಿ), 2ನೇ ವಾದಿಯಾದ ನಟರಾಜು ಆದ ನಾನು ಮತ್ತು ಸೌಭಾಗ್ಯ ಜನಿಸಿರುತ್ತೇವೆ.

5) ನನ್ನ ಚಿಕ್ಕಪ್ಪ ಪುಟ್ಟಸ್ವಾಮಿಗೌಡ ಮರಣ ಹೊಂದಿದ್ದು ಅವರಿಗೆ ಕುಮಾರ, ರೇಣುಕ ಮತ್ತು ನಾಗೇಶ ಮಕ್ಕಳಾಗಿರುತ್ತಾರೆ.

6) ನನ್ನ ತಾತ ಚಿಕ್ಕಲಿಂಗೇಗೌಡನ ಮೊದಲನೇ ಹೆಂಡತಿ ಹೊನ್ನಮ್ಮನ ಹಿರಿಯ ಮಗ ಶಿವಲಿಂಗೇಗೌಡರ ಮಕ್ಕಳಾದ ವಾದಿ ಚಿಕ್ಕಲಿಂಗೇಗೌಡ ಮತ್ತು ಪ್ರತಿವಾದಿ ಶಿವಲಿಂಗೇಗೌಡ ಷೆಡ್ಯೂಲ್ ಒಟ್ಟು ಕುಟುಂಬದ ಸ್ವತ್ತುಗಳಲ್ಲಿ ನಮಗಿರುವ ಭಾಗಾಂಶವನ್ನು ಸಾಧ್ಯವಾದರೆ ತಪ್ಪಿಸಿ ತಾವು ಎಲ್ಲಾ ಸ್ವತ್ತನ್ನು ಕಬಳಿಸಲು ನಮ್ಮಗಳಿಗೆ ತಿಳಿಯದಂತೆ ಕುಟುಂಬದಲ್ಲಿ ಈ ತೆಹಲ್‌ನವರೆಗೂ ನಮ್ಮ ಮತ್ತು ವಾದಿ, ಪ್ರತಿವಾದಿಗಳು ಹಾಗೂ ಇತರೆ ಕುಟುಂಬದ ಸದಸ್ಯರ ನಡುವೆ ಯಾವುದೇ ವಿಭಾಗ ಆಗದೇ ಇದ್ದರೂ ನಮ್ಮ ಇರುವಿಕೆಯನ್ನು ಮುಚ್ಚಿಟ್ಟು ಈ ದಾವೆಯನ್ನು ಸಲ್ಲಿಸಿರುತ್ತಾರೆ. ವಿಚಾರ ತಿಳಿದ ನಾನು ಈ ದಾವೆಯಲ್ಲಿ 2ನೇ ಪ್ರತಿವಾದಿಯಾಗಿ ಸೇರಿಕೊಳ್ಳಲು ಅರ್ಜಿ ಸಲ್ಲಿಸಿದ್ದು ಮಾನ್ಯ ನ್ಯಾಯಾಲಯವು ನನ್ನ ಅರ್ಜಿಯನ್ನು ಪುರಸ್ಕರಿಸಿರುತ್ತದೆ. ನಾನು 2ನೇ ಪ್ರತಿವಾದಿಯಾಗಿ ಈ ದಾವೆಯಲ್ಲಿ ಹಾಜರಾಗಿದ್ದು ನಂತರ ಈ ಕೇಸಿನ ವಾದಿ-1ರವರು ಪೌತಿಯಾಗಿದ್ದು ಪ್ರತಿವಾದಿ-1ರವರು ಸಹ ಪೌತಿಯಾಗಿದ್ದು ಅವರ ವಾರಸುಗಳು ಕಡತಕ್ಕೆ ಬಂದಿದ್ದು ನಮಗೆ ಕೇಸು ನಡೆದರೆ ಭಾಗ ಕೊಡಬೇಕಾಗುತ್ತದೆ ಎಂದು ನ್ಯಾಯಾಲಯಕ್ಕೆ ಗೈರು ಹಾಜರಾಗುತ್ತಿರುತ್ತಾರೆ. ಆದಕಾರಣ, ನಾನು ಮಾನ್ಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ 2ನೇ ಪ್ರತಿವಾದಿಯಿಂದ 2ನೇ ವಾದಿಯಾಗಿ ಟ್ರಾನ್ಸ್‌ಪೋಸ್ ಆಗಿರುತ್ತೇನೆ.

NOTARY M. BASAVARAJU Area MALAVALLI Revenue Taluk Reg. No. LCL98 Expiry: 5-4-2027 GOVT. OF KARNATAKA

7) ಈ ದಾವೆಯ ಷೆಡ್ಯೂಲ್‌ನಲ್ಲಿ ಕಾಣಿಸಿರುವ ಸ್ವತ್ತುಗಳೆಲ್ಲವೂ ಮೇಲ್ಕಂಡ ಚಿಕ್ಕಲಿಂಗೇಗೌಡರ ಮೊದಲನೇ ಹೆಂಡತ್ರಿ ಹೊನ್ನಮ್ಮನ ಮಕ್ಕಳು ಮತ್ತು 2ನೇ ಹೆಂಡತಿ ಚೌಡಮ್ಮನ ಮಕ್ಕಳು ಹಾಗೂ ಇವರ ಮೊಮ್ಮಕ್ಕಳ ಒಟ್ಟು ಕುಟುಂಬದ ಸ್ವತ್ತುಗಳಾಗಿರುತ್ತದೆ. ಷೆಡ್ಯೂಲ್ ಸ್ವತ್ತುಗಳಲ್ಲಿ ನಾವು ಜಂಟಿ ಸ್ವಾಧೀನಾನುಭವದಲ್ಲಿ ಇರುತ್ತೇವೆ. ಕುಟುಂಬದಲ್ಲಿ ಇಲ್ಲಿಯವರೆವಿಗೂ ಯಾವುದೇ ರೀತಿಯ ವಿಭಾಗವು ಆಗಿರುವುದಿಲ್ಲ.

8) ನಾನು ಹಾಜರು ಮಾಡಿರುವ ದಾಖಲೆಗಳನ್ನು ನನ್ನ ಪರವಾಗಿ ನಿಶಾನೆಕರಿಸಿ ಆದೇಶ ಮಾಡಬೇಕಾಗಿ ಪ್ರಾರ್ಥನೆ.

ಆದಕಾರಣ, ಷೆಡ್ಯೂಲ್ ಸ್ವತ್ತಿನಲ್ಲಿ ನನಗೆ ಬರಬೇಕಾದ ಕಾನೂನುಬದ್ಧ ಭಾಗಾಂಶವನ್ನು ಕೊಡಿಸಿಕೊಟ್ಟು ಪ್ರತ್ಯೇಕ ಸ್ವಾಧೀನವನ್ನು ಕೊಡಿಸಿ ಕೊಡಬೇಕಾಗಿ ಘನ ನ್ಯಾಯಾಲಯದಲ್ಲಿ ಪ್ರಾರ್ಥಿಸುತ್ತೇನೆ.

ಗುರುತಿಸುವ ವಕೀಲರು

ಪ್ರಮಾಣೀಕರಿಸುವವರು

ಮಳವಳ್ಳಿ
ದಿನಾಂಕ: 27–06–2026

NOTARY
M. BASAVARAJU
Area MALAVALLI
Revenue Taluk
Reg. No. LAW
GOVT. OF KARNATAKA

SWORN TO BEFORE ME
M BASAVARAJU
B.A., L.L.B
ADVOCATE & NOTARY
Malavalli 571 430
Mandya Dist